COMPT/UPLOK/BD/1982/2022 /P.O/ARE-17

## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1982/2022
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 22/12/2022

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

**ವಿಷಯ:** ಸರ್ಕಾರಿ ನೌಕರರಾದ ಶ್ರೀ ಬಿ. ಟಿ. ಮೋಹನ್ ತಂದೆ ತಿಪ್ಪಣ್ಣ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ಸಬ್ ಡಿವಿಷನ್, ಚಿತ್ರದುರ್ಗ (ಪ್ರಸ್ತುತ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬಳ್ಳಾರಿ) ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಎಂ. ಕೆ. ಗಂಗಲ್, ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ದಾವಣಗೆರೆ (ಇನ್ನು ಮುಂದೆ 'ದೂರುದಾರರು' ಎಂದು ಉಲ್ಲೇಖಿಸಲಾಗುವುದು) ಇವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ತಯಾರಿಸಿ, ಶ್ರೀ ಬಿ. ಟಿ. ಮೋಹನ್ ತಂದೆ ತಿಪ್ಪಣ್ಣ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ಸಬ್ ಡಿವಿಷನ್, ಚಿತ್ರದುರ್ಗ (ಪ್ರಸ್ತುತ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬಳ್ಳಾರಿ) (ಇನ್ನು ಮುಂದೆ ಎದುರುದಾರರು ಎಂದು ಉಲ್ಲೇಖಿಸಲಾಗುವುದು) ಇವರ ವಿರುದ್ಧ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಜಿಲ್ಲೆ ರವರಿಗೆ ಸಲ್ಲಿಸಿದ್ದು, ನಂತರ ಪೋಲೀಸ್ ಅಧೀಕ್ಷಕರು, ದಾವಣಗೆರೆರವರು ಸೋರ್ಸ್ ವರದಿಯ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಆರಕ್ಷಕ ಉಪಾಧೀಕ್ಷಕರು ಇವರು ಎದುರುದಾರರ ವಿರುದ್ಧ ತನಿಖೆ ಕೈಗೊಂಡಿದ್ದು, ಎದುರುದಾರರು ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿರುವುದು ಮತ್ತು ಅವರ ಸೇವಾ ಅವಧಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ಮತ್ತು ಸಾಲ ಪಡೆದ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021)ರ ನಿಯಮಗಳನ್ನು ಪಾಲಿಸದೆ ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ

ಉಪಲೋಕಾಯುಕ್ತರವರು ಸ್ವಯಂ ದೂರು ದಾಖಲಿಸಲು ಆದೇಶ ಮಾಡಿದ್ದು, ಅದರನ್ವಯ ದಾವಣಗೆರೆ ಲೋಕಾಯುಕ್ತ ಪೋಲೀಸ್ ಠಾಣೆಯ ಗುನ್ನೆ ನಂ. 01/2014 ರಲ್ಲಿ ಕಲಂ 13 (1)(ಇ) ಸಹ ಕಲಂ 13(2) ಪಿ.ಸಿ. ಕಾಯಿದೆ 1988 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

2) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ದಿನಾಂಕ 05/12/1985 ರಿಂದ ದಿ: 25/02/2014 ರ ವರೆಗೆ ಎದುರುದಾರರು ಹಾಗೂ ಅವರ ಪತ್ನಿಯ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಸಂಪಾದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| | |
|---|---|
| 1 | ಎದುರುದಾರರು ದಿನಾಂಕ 05/12/1985 ರಂದು ಸರ್ಕಾರಿ ಸೇವೆಗೆ ಸೇರಿದ್ದು, ನಂತರ ಅವರು ಹೊಂದಿರುವ ಆಸ್ತಿ ಹಾಗೂ ದಾಯಿತ್ವಗಳ ಕುರಿತು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಿರುವುದಿಲ್ಲ. ತನಿಖಾ ಕಾಲದಲ್ಲಿಯೂ ಸಹ ಚೆಕ್ ಅವಧಿಯ ಮುನ್ನ ಹೊಂದಿದ್ದ ಆಸ್ತಿಗಳ ಬಗ್ಗೆ ಮಾಹಿತಿಗಳು ಲಭ್ಯವಾಗಿರುವುದಿಲ್ಲವೆಂದು ತನಿಖಾಧಿಕಾರಿಯವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವಾಗ ಉಲ್ಲೇಖಿಸಿರುತ್ತಾರೆ. |
| 2 | ಎದುರುದಾರರು ಅವರ ಪತ್ನಿ ಶ್ರೀಮತಿ ಮಮತಾ ಇವರ ಹೆಸರಿಗೆ ಅವರ ತಂದೆಯಾದ ಹಣಮಪ್ಪ ಇವರು ಬ್ಯಾಡಗಿ ತಾಲ್ಲೂಕು ಕದರಮಂಡಲಗಿ ವಾಸಿಯಾದ ಮಾದೇಗೌಡ ಇವರಿಂದ ಸಿದ್ದವೀರಪ್ಪ ಬಡಾವಣೆಯ 12ನೇ ಕ್ರಾಸ್‌ನಲ್ಲಿರುವ ಸೈಟ್ ನಂ. 19 ಮತ್ತು 20 ಮುನ್ಸಿಪಲ್ ಡೋರ್ ನಂ. 4161/19 ರ 15 * 40 ಅಡಿ ಖಾಲಿ ನಿವೇಶನ ಮತ್ತು ಡೋರ್ ನಂ. 4161/20 ರಲ್ಲಿ 30 * 40 ಅಡಿ ಅಳತೆಯ ಖಾಲಿ ನಿವೇಶನವನ್ನು ಒಟ್ಟು ರೂ. 1,08,000/- ಗಳಿಗೆ ಖರೀದಿ ಮಾಡಿ ಅವರ ಹೆಂಡತಿಗೆ ದಾನದ ರೂಪದಲ್ಲಿ ಕೊಡಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಸಕಾಲದಲ್ಲಿ ತಿಳಿಸದೇ ಇರುವುದರಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 3 | ಎದುರುದಾರರು ಅವರ ಪತ್ನಿ ಶ್ರೀಮತಿ ಮಮತಾ ಇವರ ಹೆಸರಿನಲ್ಲಿ ಅವರ ತಂದೆಯಾದ ಹಣಮಪ್ಪ ಇವರು ಬ್ಯಾಡಗಿ ತಾಲ್ಲೂಕು ಕದರಮಂಡಲಗಿ ವಾಸಿಯಾದ ಮಾದೇಗೌಡ ಇವರಿಂದ ಸಿದ್ದವೀರಪ್ಪ ಬಡಾವಣೆಯ 12ನೇ ಕ್ರಾಸ್‌ನಲ್ಲಿರುವ ಸೈಟ್ ನಂ. 21 ಮುನ್ಸಿಪಲ್ ಡೋರ್ ನಂ. 4161/21 ರಲ್ಲಿ 30 * 40 ಅಡಿ ಅಳತೆಯ |

| | |
|---|---|
| | ಖಾಲಿ ನಿವೇಶನವನ್ನು ಒಟ್ಟು ರೂ. 72,000/- ಗಳಿಗೆ ಖರೀದಿ ಮಾಡಿ ಅವರ ಹೆಂಡತಿ ಇವರಿಗೆ ಉಡುಗೋರೆಯ ರೂಪದಲ್ಲಿ ಕೊಡಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಸಕಾಲದಲ್ಲಿ ತಿಳಿಸದೇ ಇರುವುದರಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 4 | ಎದುರುದಾರರು ಅವರ ಪತ್ನಿ ಶ್ರೀಮತಿ ಮಮತಾ ಇವರ ಹೆಸರಿನಲ್ಲಿ ದಿನಾಂಕ 19/04/2012 ರಂದು ಶ್ರೀಮತಿ ಎಂ. ಕನಕಲಕ್ಷ್ಮಿ ಕೋಂ ಅಚ್ಯುತ್‌ರಾವ್ ಇವರಿಂದ ಶಾಮನೂರು ಗ್ರಾಮದ ರಿ. ಸ. ನಂ. 354/143ಎ3 ರಲ್ಲಿ ಸೈಟ್ ನಂ. 14 ಮಹಾನಗರ ಪಾಲಿಕೆ, ದಾವಣಗೆರೆ ಡೋರ್ ನಂ. 534/14 ರಲ್ಲಿ 30*52 ಚದರ ಅಡಿ ಅಳತೆಯ ಖಾಲಿ ನಿವೇಶನವನ್ನು ರೂ. 94,000/- ಗಳಿಗೆ ಖರೀದಿಸಿದ್ದು ಈ ಬಗ್ಗೆ ಸದರಿ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಇರುವುದರಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 5 | ಎದುರುದಾರರು ಅವರ ಪತ್ನಿ ಶ್ರೀಮತಿ ಮಮತಾ ಇವರ ಹೆಸರಿನಲ್ಲಿ ದಿನಾಂಕ 19/04/2012 ರಂದು ಶ್ರೀಮತಿ ಎಂ. ಕನಕಲಕ್ಷ್ಮಿ ಕೋಂ ಅಚ್ಯುತ್‌ರಾವ್ ಇವರಿಂದ ಶಾಮನೂರು ಗ್ರಾಮದ ರಿ. ಸ. ನಂ. 354/143ಎ3 ರಲ್ಲಿ ಸೈಟ್ ನಂ. 15 ಮಹಾನಗರ ಪಾಲಿಕೆ, ದಾವಣಗೆರೆ ಡೋರ್ ನಂ. 538/15 ರಲ್ಲಿ 30*52 ಚದರ ಅಡಿ ಅಳತೆಯ ಖಾಲಿ ನಿವೇಶನವನ್ನು ರೂ. 94,000/- ಗಳಿಗೆ ಖರೀದಿಸಿದ್ದು ಈ ಬಗ್ಗೆ ಸದರಿ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಇರುವುದರಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 6 | ಎದುರುದಾರರು ಅವರ ಪತ್ನಿ ಶ್ರೀಮತಿ ಮಮತಾ ಇವರ ಹೆಸರಿನಲ್ಲಿ ದಿನಾಂಕ 28/07/2012 ರಂದು ವೋಕ್ಸೋ ವ್ಯಾಗಾನ್ ಕಾರ್ (ಕೆ. ಎ. 17 ಎನ್ 7282) ವಾಹನವನ್ನು ರೂ. 9,01,521-00 ಗಳಿಗೆ ಖರೀದಿಸಿದ್ದು ಈ ಬಗ್ಗೆ ವಾಹನ ಖರೀದಿಸಿದ ನಂತರ ಒಂದು ತಿಂಗಳೊಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡದೇ ಇರುವುದರಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 7 | ಎದುರುದಾರರು ಅವರ ಪತ್ನಿ ಶ್ರೀಮತಿ ಮಮತಾ ಇವರ ಹೆಸರಿನಲ್ಲಿ ದಿನಾಂಕ |

| | |
|---|---|
| | 20/06/2011 ರಂದು ಟಿ. ವಿ. ಎಸ್. ಸ್ಕೂಟಿ ಪೆಪ್ ಪ್ಲಸ್ ದ್ವಿಚಕ್ರ ವಾಹನ (ಕೆ. ಎ. 17-ಇ.ಇ. 7379) ವಾಹನವನ್ನು ರೂ. 37,890-00 ಗಳಿಗೆ ಖರೀದಿಸಿದ್ದು ಈ ಬಗ್ಗೆ ವಾಹನ ಖರೀದಿಸಿದ ನಂತರ ಒಂದು ತಿಂಗಳೊಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡದೇ ಇರುವುದರಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 8 | ಎದುರುದಾರರು ಅವರ ಪತ್ನಿ ಶ್ರೀಮತಿ ಮಮತಾ ಇವರ ಹೆಸರಿನಲ್ಲಿ ದಿನಾಂಕ 26/08/2003 ರಂದು ಹೊಂಡಾ ಎಕ್ಟಿವ್ ದ್ವಿ ಚಕ್ರ ವಾಹನ (ಕೆ. ಎ. 17-ವೈ 2935) ವಾಹನವನ್ನು ರೂ. 45,464-00 ಗಳಿಗೆ ಖರೀದಿಸಿದ್ದು ಈ ಬಗ್ಗೆ ವಾಹನ ಖರೀದಿಸಿದ ನಂತರ ಒಂದು ತಿಂಗಳೊಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡದೇ ಇರುವುದರಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 9 | ದಿನಾಂಕ 26/07/2013 ರಂದು ತನಿಖಾಧಿಕಾರಿಗಳು ಎದುರುದಾರರ ದಾವಣಗೆರೆ ಮನೆಯಲ್ಲಿ ಶೋಧನೆ ಮಾಡಿದಾಗ 1012.120 ಗ್ರಾಂ ಬಂಗಾರದ ಆಭರಣಗಳು ಹಾಗೂ 4716.430 ಗ್ರಾಂ ಬೆಳ್ಳಿಯ ವಸ್ತುಗಳು ಕಂಡು ಬಂದಿದ್ದು, ಅವುಗಳ ಮೌಲ್ಯ ರೂ. 23,55,470-00 ಮೌಲ್ಯ ಮಾಪನದಿಂದ ತಿಳಿದಿದ್ದು, ಈ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿರುವುದಿಲ್ಲ. |
| 10 | ಎದುರುದಾರರು ಐ.ಸಿ.ಐ.ಸಿ. ಬ್ಯಾಂಕ್, ದಾವಣಗೆರೆಯಲ್ಲಿ ಅವರ ಪತ್ನಿಯ ಹೆಸರಿನಲ್ಲಿ ಸಾಲದ ಖಾತೆ ನಂ. ಎಲ್‌ಬಿಡಿವಿಜಿ 00000834186 ರಲ್ಲಿ 6,00,000/- ರೂಪಾಯಿ ಸಾಲ ಪಡೆದಿದ್ದು ಇದನ್ನು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಿರುವುದಿಲ್ಲ. |
| 11 | ಎದುರುದಾರರು ಇಂಡಸ್ ಇಂಡ್ ಬ್ಯಾಂಕ್ ದಾವಣಗೆರೆಯಲ್ಲಿ ಅವರ ಪತ್ನಿ ಹೆಸರಿನಲ್ಲಿ ಸಾಲದ ಖಾತೆ ನಂ. ಕೆಎಸ್‌ಡಿ 00848ಸಿ ಅಡಿ 4.50,000/- ರೂಪಾಯಿ ಸಾಲ ಪಡೆದಿರುವ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿರುವುದಿಲ್ಲ. |
| 12 | ಎದುರುದಾರರು ಪಂಜಾಬ್ ನ್ಯಾಷನಲ್ ಬ್ಯಾಂಕ್, ದಾವಣಗೆರೆಯಲ್ಲಿ ರೂ. 10,00,000/- ಸಾಲವನ್ನು ಮನೆ ನಿರ್ಮಾಣ ಮಾಡುವ ಉದ್ದೇಶದಿಂದ ಪಡೆದಿರುವ ಬಗ್ಗೆ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ನಮೂದಿಸಿದ್ದು ಈ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿರುವುದಿಲ್ಲ. |
| 13 | ಎದುರುದಾರರು ಇಂಡಿಕಾ ಕಾರ್ ಸಂಖ್ಯೆ ಕೆ. ಎ 17-ಎಂ.3179 ರ ವಾಹನವನ್ನು |

| | |
|---|---|
| | 2015 ರಲ್ಲಿ ಶ್ರೀ ನವೀನ್ ಕುಮಾರ ಎಂಬುವವರಿಗೆ 1,50,000/- ರೂಪಾಯಿಗಳಿಗೆ ಮಾರಾಟ ಮಾಡಿದ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿರುವುದಿಲ್ಲ. |
| 14 | ಎದುರುದಾರರು ದಾವಣಗೆರೆ ನಿವೇಶನ ಸಂಖ್ಯೆ 2912/519 ನ್ನು ದಿನಾಂಕ 29/10/2001 ರಂದು ಶ್ರೀ ಎಸ್. ಆರ್. ಶೇಖರಪ್ಪ ಬಿನ್ ಎಸ್. ರುದ್ರಪ್ಪ ಇವರಿಂದ ರೂ. 1,38,000/- ಗಳಿಗೆ ಖರೀದಿ ಮಾಡಿದ್ದು, ನಂತರ ದಿನಾಂಕ 07/04/2006 ರಂದು ಶ್ರೀ ಓಂ ಪ್ರಕಾಶ್ ಬಿನ್ ಲೇಟ್ ಬಿ. ಎಂ. ಸಿದ್ದಪ್ಪ ಇವರಿಗೆ 1,56,000/- ರೂ. ಗಳಿಗೆ ಮಾರಾಟ ಮಾಡಿರುತ್ತಾರೆ. ಖರೀದಿ ಮಾಡುವ ಪೂರ್ವದಲ್ಲಿ ಪೂರ್ವಾನುಮತಿ ಪಡೆದಿರುವುದಿಲ್ಲ ಹಾಗೂ ಮಾರಾಟ ಮಾಡಿದ ನಂತರ ಸರ್ಕಾರಕ್ಕೆ ವರದಿ ಮಾಡದೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ಅಡಿ ಉಲ್ಲಂಘನೆ ಮಾಡಿರುತ್ತಾರೆ. |
| 15 | ಎದುರುದಾರರು ಸರ್ಕಾರಿ ಸೇವೆಗೆ ದಿನಾಂಕ 05/12/1985 ರಂದು ಸೇರಿದ್ದು 1986-87 ರಿಂದ 1991-92 ಮತ್ತು 1993 ರಿಂದ 1996-97, 1998-99 ಸಾಲಿನಿಂದ 2001-02 ಹಾಗೂ 2008-09 ನೇ ಸಾಲಿನ ವರೆಗೆ ಆಸ್ತಿ ದಾಯಿತ್ವ ಪಟ್ಟಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 23 (2) ಅನ್ನು ಉಲ್ಲಂಘಿಸಿರುತ್ತಾರೆ. |
| 16 | ಎದುರುದಾರರ ಕೆನರಾ ಬ್ಯಾಂಕ್ ಪಿ.ಜೆ. ಬಡಾವಣೆ, ದಾವಣಗೆರೆ ಶಾಖೆಯ ಲಾಕರ್ ನಂ. 203 ನ್ನು ಶೋಧನೆ ಮಾಡಲಾಗಿ ಸದರಿ ಲಾಕರ್‌ನಲ್ಲಿ 500.900 ಗ್ರಾಂ ಬಂಗಾರದ ಆಭರಣಗಳು ಇದ್ದು ಇದರ ಮೌಲ್ಯವನ್ನು ಅಕ್ಕಸಾಲಿಗರಾದ ಶ್ರೀ ಎಸ್. ಪಿ. ರಾಯ್ಕರ್ ಇವರು ನಿರ್ಧರಿಸಿದಂತೆ ರೂ. 3,86,050/- ಗಳಾಗುತ್ತಿದ್ದು ಇದನ್ನೂ ಸಹ ಆಸ್ತಿ ದಾಯಿತ್ವ ಪಟ್ಟಿಯಲ್ಲಿ ನಮೂದಿಸಿ ಪ್ರಾಧಿಕಾರಕ್ಕೆ ಸಲ್ಲಿಸದೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 23 (2) ಅನ್ನು ಉಲ್ಲಂಘಿಸಿರುತ್ತಾರೆ. |

3. ಎದುರುದಾರರು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ತನಿಖೆ ಕಾಲದಲ್ಲಿ ಚರಾಸ್ತಿಗಳನ್ನು ಖರೀದಿಸಿದ ಒಂದು ತಿಂಗಳೊಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೇ ಇರುವುದರಿಂದ ಹಾಗೂ ಯಾವುದೇ ಬ್ಯಾಂಕಿನಿಂದ ಸಾಲ ಪಡೆದ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೇ ಇರುವುದರಿಂದ ಮತ್ತು ಸ್ಥಿರಾಸ್ತಿಗಳನ್ನು ಖರೀದಿಸುವ

ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೆ ನಿಯಮ 23 (2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ನಿಯಮ 24 (3) ರನ್ವಯ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಹೊಂದಿರುವುದು ಹಾಗೂ ಅನುಮತಿ ಇಲ್ಲದೆ ಸ್ಥಿರಾಸ್ತಿ/ಚರಾಸ್ತಿಯನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳು ಎದುರುದಾರು ನಿಯಮಗಳನ್ನು ಪಾಲಿಸದೇ ಇರುವುದು ಅವರ ದುರ್ನಡತೆಯನ್ನು ತೋರಿಸುತ್ತದೆ.

4. ಎದುರುದಾರರಿಗೆ ದಿನಾಂಕ 06/07/2022 ರಂದು ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು ಅದಕ್ಕೆ ಸದರಿಯವರು ತಮ್ಮ ಸಮಜಾಯಿಷಿಯನ್ನು ದಿನಾಂಕ 12/12/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ತಾನು ಹಾಗೂ ತನ್ನ ಪತ್ನಿ ಹೊಂದಿರುವ ಚರ ಮತ್ತು ಸ್ಥಿರ ಆಸ್ತಿಗಳ ಸಂಬಂಧವಾಗಿ ನಿಗದಿತ ಪ್ರಾಧಿಕಾರಕ್ಕೆ ಎಲ್ಲಾ ಮಾಹಿತಿಗಳ್ನು ಒದಗಿಸಿರುತ್ತೇನೆ. ನಿಗದಿತ ಪ್ರಾಧಿಕಾರದವರು ತಾನು, ಸೇವಾವಧಿಯಲ್ಲಿ ಸಲ್ಲಿಸಿರುವ ಆಸ್ತಿ ಮತ್ತು ದಾಯಿತ್ವ ಪಟ್ಟಿಗಳನ್ನು ಯಾವುದೇ ಶರಾ ಇಲ್ಲದೆ ಅಂಗೀಕಾರ ಮಾಡಿರುತ್ತಾರೆ ಎಂದು ಉಲ್ಲೇಖಿಸಿರುತ್ತಾರೆ. ಆದರೆ ಸದರಿಯವರು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಯಾವುದೇ ಆದೇಶದ ಪತ್ರವನ್ನು ತಮ್ಮ ಸಮಜಾಯಿಷಿಯೊಂದಿಗೆ ಸಲ್ಲಿಸಿರುವುದಿಲ್ಲ. ಈ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

5. ಆದ್ದರಿಂದ ಎದುರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗುತ್ತಿದೆ.

(1) ಎದುರುದಾರರ ವಿರುದ್ಧ ಅಸಮತೋಲನ ಆಸ್ತಿಯನ್ನು ಹೊಂದಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ವಿಚಾರವಾಗಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ,

ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ಅಡಿಯಲ್ಲಿ ನಿಯಮ 14(ಎ) ರಡಿ ಸಕ್ಷಮ ಪ್ರಾಧಿಕಾರದ ಮೂಲಕ ಇಲಾಖಾ ವಿಚಾರಣೆ ನಡೆಸಲು ಕೋರಿದೆ.

(2) ಭಾರತದ ಸರ್ವೋಚ್ಛ ನ್ಯಾಯಾಲಯದ ತೀರ್ಪು AIR 1978 of Hon'ble Supreme Court, page 3047, State of Karnataka v/s Kempaiah, ಈ ಕೇಸಿನಲ್ಲಿ ಹೇಳಿರುವಂತೆ ಎದುರುದಾರರು ಕಾನೂನು ಸಮ್ಮತದ ಆದಾಯಕ್ಕಿಂತ ಅಸಮತೋಲನ ಆದಾಯವನ್ನು ಹೇಗೆ ಹೊಂದಿದರು ಎಂಬುದರ ಬಗ್ಗೆ ವಿಚಾರಣೆಯನ್ನು ಸರ್ಕಾರವೇ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ಅಡಿಯಲ್ಲಿ ವಿಚಾರಣೆ ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

22/11/22

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.